ಶ್ರೀ ಕೆ.ಪೆಚ್. ಪಾಟೀಲ್.—ಇವತ್ತಿಗೂ ಸಹಾ ನೀವು ಮುತ್ತು ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದವರನ್ನು ಗಮನದಲ್ಲಿ ಇಟ್ಟುಕೊಂಡು ಯಾವ ಯಾವ ಸಂಸ್ಥೆಗಳಿಗೆ ಯಾವ ಯಾವುದಕ್ಕೆ ಹಾಕಿದರೆ ಪೂರ್ತಿ ಲಾಭ ಬರುತ್ತದೆ ಎಂಬುದನ್ನು ನೋಡಬೇಕು. ಹೊಸದಾಗಿ ಮಾನ್ಯ ಜೆ.ಎಚ್. ಪಾಟೀಲರೂ ಒಂದು ಮಾತಾಡ್ಯಾರೆ. ರಫ್ತು ಮಾಡುವ ಕೈಗಾರಿಕೆಗಳ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಯವರು ಬಹಳ ಪ್ರಾಮುಖ್ಯತೆ ಕೊಡುತ್ತಿರುವುದರಿಂದ ಇಂತಹ ಕೈಗಾರಿಕೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡಿ. ಹುಲಕೋಟಿಯಲ್ಲಿ ೨ ಮಿಲ್‌ಗಳು ಇದ್ದು ಇವೆರಡೂ ಸರಿಯಾಗಿವೆ. ರಾಣೆಬೆನ್ನೂರಿನಲ್ಲೂ ಕೂಡಾ ಹರಿಜನರನ್ನು ಹೆಚ್ಚಾಗಿ ಸದಸ್ಯರನ್ನಾಗಿ ಪಡೆದುಕೊಂಡು ಒಳ್ಳೆಯ ಉತ್ಪಾದನೆಯ ಕೆಲಸ ಮಾಡುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ರಾಣೆಬೆನ್ನೂರಿನಲ್ಲಿ ಏನು ಕೊಟ್ಟಿದ್ದೀರೆ ಅದನ್ನು ನೋಡೋಣ. ಒಂದೆರಡು ಮೂರು ಫ್ಯಾಕ್ಟರಿಗಳನ್ನು ಬಿಟ್ಟರೆ ಮಿಕ್ಕದ್ದರಲ್ಲಿ ನಮಗೆ ಕಹಿ ಅನುಭವವೇ ಜಾಸ್ತಿಯಾಗಿದೆ. ಇನ್ನು ಮಾನ್ಯ ಸದಸ್ಯರು ಏನು ಎಕ್ಸ್‌ಪೋರ್ಟ್ ಓರಿಯೆಂಟ್‌ನ್ನು ಗಮನದಲ್ಲಿ ಇಟ್ಟುಕೊಂಡು ವ್ಯವಸ್ಥೆ ಮಾಡಿ ವಿರೋಧಪಕ್ಷದವರನ್ನು ಕಾಂಟಾಕ್ಟ್ ಮಾಡಿ ಕೆಲಸ ಮಾಡಿ ಎಂದಿದ್ದಾರೆ ಅದು ಸೂಕ್ತ ಸಲಹೆ ಅದನ್ನು ಮಾಡುತ್ತೇವೆ.

ಶ್ರೀ ಕೆ. ಪೆಚ್. ಪಾಟೀಲ್.—ಸಹಕಾರ ಸಂಘಗಳೂ ಕೆಡುತ್ತವೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಹುಬ್ಬಳ್ಳಿ ಮಿಲ್, ಸರ್ಕಾರದ್ದು ಸರಿ ಇದೆಯೇ ? ಅದು ಸರಿಯಾಗಿ ನಡೆಯುತ್ತಿಲ್ಲ ಅದನ್ನು ಇವರಿಗೆ ಕೊಡಿ ಸರಿಯಾಗಿ ನಡೆಸುತ್ತಾರೆ. ನೀವು ಸಹಕಾರಿಗಳಾಗಿದ್ದು ಇವರ ಬಗ್ಗೆ ಪೂರ್ವಾಗ್ರಹಪೀಡಿತರಾಗುವುದು ಬೇಡ. ಆಲ್ಲಿ ಜನರು ಚೆನ್ನಾಗಿಲ್ಲದಿದ್ದರೆ ತೆಗೆದುಹಾಕಿ. ಜನರಿಗೆ ಕಲ್ಯಾಣ ಮಾಡುವ ಸಂಸ್ಥೆಗಳನ್ನು ತಾವು ಮನಸ್ಸಿನಲ್ಲಿ ಇಟ್ಟುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ.—ಸಹಕಾರಿ ತತ್ವ ತಮಗೆ ಚೆನ್ನಾಗಿ ತಿಳಿದಿದೆ. ದುರಾದೃಷ್ಟವಶಾತ್ ನಮ್ಮ ಅನುಭವ ಹಾಗಿಲ್ಲ. ಸಹಕಾರಿಗಳು ಬಹಳ ಜನರು ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ನಡೆಯುತ್ತಾ ಇಲ್ಲ. ಆದುದರಿಂದಲೇ ನಾವು ಕಾನೂನು ಬದಲಾವಣೆಗಳನ್ನು ಮಾಡುತ್ತಾ ಇರುವುದು. ಇವತ್ತು ಮನಸ್ಸನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ನನ್ನ ಅನುಭವದಲ್ಲಿ ಇವತ್ತು ನಿಜವನ್ನು ಹೇಳಬೇಕೆಂದರೆ ಇನ್ನು ಮೇಲೆ ಸಹಕಾರಿಗಳಿಂದ ಈ ಸಕ್ಕರೆ ಕಾರ್ಖಾನೆ ಹಾಗೂ ಸ್ಪಿನ್ನಿಂಗ್ ಮಿಲ್‌ಗಳನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳು ತೆಗೆದುಕೊಂಡು ಮಾಡಲಿ ಎನಿಸಿಬಿಟ್ಟಿದೆ. ಇವರಿಂದ ನಾವು ಬೈಸಿಕೊಳ್ಳುವುದು ಸಾಕು. ಒಂದೆರಡು ಸರಿಯಾಗಿ ನಡೆಯುತ್ತಿರುಬಹುದು. ನಿಮಗೆ ಗೊತ್ತಿದೆ ನಿಮ್ಮ ಮೈದಡರಲ್ಲಿ ಬಡ್ಡಿ ಮಜಾ ಮಾಡಿ ಅಸಲನ್ನು ರಿಕವರಿ ಮಾಡಿದ್ದೇವೆ. ಆದರೆ ಇಲ್ಲಿ ಜವಾಬ್ದಾರಿ ಇಲ್ಲ. ಜವಾಬ್ದಾರಿಯಿಂದ ಉತ್ತರ ಕೊಡುವವರು ಇಲ್ಲ. ನಾವು ಬೇಕಾದಷ್ಟು ಆಫಿಶಿಯಲ್ಸ್ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಹಾಗೂ ೩೦ ಜನರನ್ನು ಡಿಸ್‌ಮಿಸ್ ಸಹಾ ಮಾಡಿದ್ದೇವೆ. ಈ ಇಲಾಖೆಯಲ್ಲಿ ನಾನ್ ಆಫಿಶಿಯಲ್ಸ್ ಮೇಲೆ ಹೇಗೆ ಕ್ರಮ ತೆಗೆದುಕೊಂಡು ಡಿಸ್‌ಮಿಸ್ ಮಾಡುತ್ತೀರಿ ? ಇವತ್ತು ಈ ಕೈಗಾರಿಕೆಗಳಿಂದ ನಮಗೆ ಕಹಿ ಅನುಭವ ಆಗಿದೆ. ನಾನೂ ಪಾಟೀಲರ ಹಿಸ್ಟರಿ ಪಳಗಿದವರೇ ಆಗಿದ್ದೇನೆ. ಮುಂದೆ ಕ್ರಮ ಕೈಗೊಳ್ಳುವಾಗ ನಿರ್ದಾಕ್ಷಿಣ್ಯವಾಗಿ ಕಾರ್ಯಕ್ರಮ ಕೈಗೊಳ್ಳುತ್ತೇನೆ.

ಬೆಳಗಾಂವಿ ಜಿಲ್ಲೆಯ ಪಂತ ಬಾಳೇಕುಂದ್ರಿಯಲ್ಲಿರುವ ನೂಲಿನ ಗಿರಣಿಯ ಬಗ್ಗೆ

೧೨ (೧೪೯) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳಗಾಂವಿ ಜಿಲ್ಲೆಯ ಪಂತ ಬಾಳೆಕುಂದ್ರಿಯಲ್ಲಿರುವ ನೂಲಿನ ಗಿರಣಿಯು ಪ್ರಾರಂಭ ಕಾಲದಲ್ಲಿದ್ದ ಉತ್ಪಾದಕರ ಸಂಖ್ಯೆ ಹಾಗೂ ಇನ್ನುಳಿದ ಸದಸ್ಯರ ಸಂಖ್ಯೆ ಎಷ್ಟು ?

ಆ) ಸದರಿ ಗಿರಣಿಗೆ ಪ್ರಾರಂಭದಿಂದಲೂ ಇಲ್ಲಿಯವರೆಗೆ ಪ್ರತಿ ವರ್ಷ ಆಗಿರುವ ನಷ್ಟದ ಪೂರ್ತಿ ವಿವರ ಎಷ್ಟು ?

ಇ) ನಷ್ಟಕ್ಕೆ ಒಳಪಟ್ಟಿರುವ ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿರುವ ಸದಸ್ಯರ ಮೇಲೆ ಸರ್ಕಾರದಿಂದ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ಗಿರಣಿಯು ಉತ್ಪಾದನೆ ಪ್ರಾರಂಭಿಸಿದಾಗ ಇದ್ದ ಉತ್ಪಾದಕ ಸದಸ್ಯರ ಸಂಖ್ಯೆ : ೨೩೭. ಇನ್ನುಳಿದ ಸದಸ್ಯರ ಸಂಖ್ಯೆ : ೪೬೨.

ಆ) ಉತ್ಪಾದನೆ ಆರಂಭಿಸಿದ ಸಾಲಿನಿಂದ ಗಿರಣಿಯು ಈ ಕೆಳಕಂಡ ವಿವರಗಳಂತೆ ನಷ್ಟ ಅನುಭವಿಸಿರುತ್ತದೆ.

ಕ್ರಮ ಸಂಖ್ಯೆ	ವರ್ಷ	ಅನುಭವಿಸಿದ ನಷ್ಟ ಲಕ್ಷ ರೂ.ಗಳಲ್ಲಿ
೧.	೧೯೮೩–೮೪	೯೦.೭೩ (ಹಿಂದಿನ ಸಾಲಿನ ಒಟ್ಟುಗೂಡಿದ ಲಾಭ ೧೦.೯೭ ಲಕ್ಷ ರೂ.ಗಳನ್ನು ಕಳೆದು)
೨.	೧೯೮೪–೮೫	೯೦.೦೭
೩.	೧೯೮೫–೮೬	೮೩.೨೭
೪.	೧೯೮೬–೮೭	೩೮.೮೩
	(೩೦–೧೨–೮೭ರವರೆಗೆ)	೩೦೨.೯೦ ಲಕ್ಷ ರೂ.ಗಳು

ಇ) ಕೆಲವು ಅನಿವಾರ್ಯತೆಗಳ ಕಾರಣಗಳಿಂದಾಗಿ, ಈ ಗಿರಣಿಯು ನಷ್ಟವನ್ನು ಹೊಂದಿದೆ ಎಂಬ ವರದಿಗಳು ಬಂದಿವೆ ಗಿರಣಿಯು ಹೊಂದಿರುವ ಇಂತಹ ನಷ್ಟಕ್ಕೆ ಆಡಳಿತ ಮಂಡಳಿಯು ಯಾವ ಸದಸ್ಯನೂ ಜವಾಬ್ದಾರನೆಂಬ ಬಗ್ಗೆ ಯಾವ ಮಾಹಿತಿಯೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇಂತಹ ಈಗಿನ ಪರಿಸ್ಥಿತಿಯಲ್ಲಿ ಆಡಳಿತ ಮಂಡಳಿಯ ಸದಸ್ಯರ ಮೇಲೆ ಕ್ರಮ ಜರುಗಿಸುವ ಯಾವ ಪ್ರಸ್ತಾವನೆಗಳು ಬಂದಿರುವುದಿಲ್ಲ.

ಶ್ರೀ ಎಂ.ಎಸ್. ಪಾಟೀಲ್.—ಗಿರಣಿಯನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಎಷ್ಟು ಬಂಡವಾಳವನ್ನು ಹಾಕಿದೆ, ಖಾಸಗೀಯವರು ಎಷ್ಟು ಬಂಡವಾಳವನ್ನು ಹಾಕಿದ್ದಾರೆ ? ಮೂರು ಕೋಟಿ ರೂಪಾಯಿ ನಷ್ಟ ಮಾಡಿರತಕ್ಕ ಆಡಳಿತ ಮಂಡಳಿಯವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ? ಯಾರು ತಪ್ಪು ಮಾಡಿದ್ದಾರೆ ? ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ಸರ್ಕಾರ ಇಲ್ಲಿಯವರೆಗೆ ಏನು ಮಾಡುತ್ತಿತ್ತು ? ನಾವು ಇದನ್ನು ಸರ್ಕಾರದ ಗಮನಕ್ಕೆ ತಂದ ಮೇಲೆ ಇಂತಹ ಬೇಜವಾಬ್ದಾರಿ ಉತ್ತರ ಕೊಡುತ್ತಾ ಹೋದರೆ ನಾವು ಯಾರನ್ನು ಕೇಳಬೇಕು ?

ಶ್ರೀ ಆರ್.ಎಲ್. ಜಾಲಪ್ಪ.—ಇದು ಬೇಜವಾಬ್ದಾರಿಯ ಉತ್ತರವಲ್ಲ. ಜವಾಬ್ದಾರಿಯುತವಾದ ಉತ್ತರವನ್ನು ಕೊಟ್ಟಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಹಲವಾರು ಕಾರಣಗಳಿಂದ ಲಾಸ್ ಆಗಿದೆ. ಲಾಸ್ ಆಗಿರತಕ್ಕ ಕಾಲದಲ್ಲಿ ಯಾರು ಅಧ್ಯಕ್ಷರಾಗಿದ್ದರು ಯಾರು ಡೈರೆಕ್ಟರ್ ಆಗಿದ್ದರು ಯಾವ ಮ್ಯಾನೇಜ್‌ಮೆಂಟ್ ಇತ್ತು ಎಂಬುದನ್ನು ತಿಳಿದುಕೊಂಡು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ಇನ್ಸ್‌ಪೆಕ್ಷನ್ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್.—ಸರ್ಕಾರದಲ್ಲಿ ಯಂತ್ರವಿದೆ ಯಾರು ತಪ್ಪು ಮಾಡಿದ್ದಾರೆಂಬುದನ್ನು ಕಂಡುಕೊಳ್ಳಬೇಕು. ನಾವು ಯಾರು ತಪ್ಪು ಮಾಡಿದ್ದಾರೆಂದು ಹೇಳುವುದಾದರೆ ಸರ್ಕಾರದ ಕರ್ತವ್ಯವೇನು ? ಲಾಸ್ ಆಗಲಿಕ್ಕೆ ಯಾರು ಕಾರಣಕರ್ತರು ಆಡಳಿತ ಮಂಡಳಿಯವರು ಯಾರೇ ಆಗಿದ್ದರೂ ಕೂಡ ತಪ್ಪು ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಗಳಿಗೆ ವಿಷಯ ಗೊತ್ತಿದ್ದರೂ ಕೂಡ ಮುಚ್ಚಿಡತಕ್ಕ ಕೆಲಸ ಮಾಡುತ್ತಿದ್ದಾರೆ. ತಪ್ಪು ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಿ, ಇಲ್ಲದಿದ್ದರೆ ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಇದರಲ್ಲಿ ಮುಚ್ಚಿಡತಕ್ಕ ಅವಶ್ಯಕತೆ ಇಲ್ಲ. ಯಾರನ್ನೂ ಮುಚ್ಚಿಡಬೇಕಾದ ಅವಶ್ಯಕತೆ ಇಲ್ಲ. ನಾನು ಈಗ ಹೇಳುತ್ತಿದ್ದೇನೆ ಸೆಕ್ಷನ್ ೧೬೫ರ ಪ್ರಕಾರ ಇನ್ಸ್‌ಪೆಕ್ಷನ್ ಮಾಡಿಸಿ, ಯಾರಾದರೂ ತಪ್ಪು ಮಾಡಿದ್ದಾರೆಂದು ಕಂಡುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್.—ಕೋಟಿ ರೂಪಾಯಿ ನಷ್ಟ ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ೧೦ ರೂಪಾಯಿ ಲಂಚ ತೆಗೆದುಕೊಂಡಿರುವವರ ಮೇಲೆ ಕ್ರಮ ಕೈಗೊಳ್ಳುತ್ತಾರೆ. ಕೋಟಿ ರೂಪಾಯಿ ಲಾಸ್ ಮಾಡಿರತಕ್ಕ ಆಡಳಿತ ಮಂಡಳಿಯವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಯಾರಾದರೂ ೧೦ ರೂಪಾಯಿ ಲಂಚ ತೆಗೆದುಕೊಂಡ ಸರ್ಕಾರಿ ನೌಕರನ್ನು ಡಿಸ್‌ಮಿಸ್ ಮಾಡತಕ್ಕ ಕ್ರಮವನ್ನು ಸರ್ಕಾರ ಮಾಡುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಆಡಳಿತ ಮಂಡಳಿಯ ಅಧ್ಯಕ್ಷರು ಯಾರೆಂಬುದು ನನಗೆ ಗೊತ್ತಿಲ್ಲ. ಡೈರೆಕ್ಟರುಗಳು ಯಾರೆಂದಬುದು ನನಗೆ ಗೊತ್ತಿಲ್ಲ. ಯಾರನ್ನು ಮುಚ್ಚಿಡತಕ್ಕ ಅವಶ್ಯಕತೆ ನನಗಿಲ್ಲ. ಯಾರೇ ತಪ್ಪು ಮಾಡಿರಲಿ ಸೆಕ್ಷನ್ ೧೬೫ರ ಪ್ರಕಾರ ಇನ್ಸ್‌ಪೆಕ್ಷನ್ ಮಾಡಿಸಿ, ಲೋಪದೋಷಗಳು ಕಂಡುಬಂದರೆ ಸೂಕ್ತಕ್ರಮ ಕೈಗೊಳ್ಳಲು ಲೋಕಾಯುಕ್ತಕ್ಕೆ ಕಳುಹಿಸಿ ಕೊಡುತ್ತೇನೆ. ಯಾರನ್ನೂ ಮುಚ್ಚಿಡುವುದಿಲ್ಲ. ನನ್ನ ಅಪ್ಪನಾಗಿರಲೀ ನನ್ನ ತಮ್ಮನಾಗಿರಲೀ ನಾನು ಕ್ರಮ ತೆಗೆದು ಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಮಾನ್ಯ ಎಂ.ಎಸ್. ಕೃಷ್ಣನ್‌ರವರು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ ಮುಂದಕ್ಕೆ ಹಾಕಿ, ಮಂತ್ರಿಗಳು ಸಭೆಗೆ ಬಂದಾಗ ಉತ್ತರ ಕೊಡಲಿ. ಮಾನ್ಯ ಗುರುಪ್ರಸಾದರವರ ಪ್ರಶ್ನೆಯೂ ಸಹ ಬಾರದೇ ಇರತಕ್ಕ ಮಂತ್ರಿಗಳಿಗೆ ಸಂಬಂಧ ಪಟ್ಟಿರುವುದರಿಂದ ಅದನ್ನು ಸಹ ಮುಂದಕ್ಕೆ ಹಾಕಿದರೆ ಒಳ್ಳೆಯದೆಂದು ಕಾಣುತ್ತದೆ.

ಅಧ್ಯಕ್ಷರು.—ಆಯಿತು; ಯಾರು ಉತ್ತರ ಹೇಳಬೇಕೋ ಅವರೇ ಹೇಳಲಿ. ತಮ್ಮ ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ.

ಸರಕಾರಿ ಜಮೀನುಗಳಲ್ಲಿ ಭೂ ರಹಿತ ಹರಿಜನ-ಗಿರಿಜನರು ಸಾಗುವಳಿ ಮಾಡುವ ಬಗ್ಗೆ

೧೬ (೨೫೧ ಇ) ಶ್ರೀ ಜಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸರಕಾರಿ ಜಮೀನುಗಳಲ್ಲಿ ಭೂ ರಹಿತ ಹರಿಜನ-ಗಿರಿಜನರು ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಸಾಗುವಳಿ ಚೀಟಿ ನೀಡಲು ಸರಕಾರದವರು ಯೋಚಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರವು ಆದೇಶ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧-೯-೧೯೭೭ ಮತ್ತು ಸಂಖ್ಯೆ ಆರ್‌ಡಿ ೨೭ ಎಲ್‌ಜಿಪಿ ೮೧, ದಿನಾಂಕ ೨೬-೩-೧೯೮೧ ರಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ ಹರಿಜನ-ಗಿರಿಜನ ಪರವಾಗಿ ಸಕ್ರಮೀಕರಣಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿರುತ್ತದೆ. ಇಂತಹವರು ದಿನಾಂಕ ೧೫-೮-೧೯೮೨ರ ಒಳಗೆ ಸಕ್ರಮೀಕರಣಗೊಳಿಸಲು ಅರ್ಜಿಗಳನ್ನು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸಲ್ಲಿಸಲು ಸುತ್ತೋಲೆ ಸಂಖ್ಯೆ: ಆರ್‌ಡಿ ೪೯ ಎಲ್‌ಜಿಪಿ ೮೨, ದಿನಾಂಕ ೨೬-೬-೧೯೮೨ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಆದರೆ ಇನ್ನೂ ಒತ್ತುವರಿ ಪ್ರಕರಣಗಳು ನಡೆಯುತ್ತಾ ಬಂದು ಸಕ್ರಮೀಕರಣಗೊಳಿಸುವ ಪ್ರಶ್ನೆ ಉದ್ಭವಿಸಿರುವುದರಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರಲ್ಲಿನ ಅನಿಶ್ಚಿತತೆಯನ್ನು ಹೋಗಲಾಡಿಸಿ ಅರ್ಹರು ಬೇಸಾಯ ಕಸಬನ್ನು ನಿಶ್ಚಿತ ರೀತಿಯಲ್ಲಿ ನಡೆಸಿಕೊಂಡು ಹೋಗಲು ಅನುವು ಆಗುವಂತೆ ಸರ್ಕಾರವು ಭೂಕಂದಾಯ ಅಧಿನಿಯಮ, ೧೯೬೪ರ ಕಲಂ ೪೪ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಅನುಕೂಲ ಮಾಡಿಕೊಡಲು ಸರ್ಕಾರ ತೀರ್ಮಾನಿಸಿದೆ. ಈಗ ಸದರಿ ತಿದ್ದುಪಡಿಯು ಉಭಯ ಸದನಗಳ ಜಂಟೀ ಸಲಹಾ ಸಮಿತಿಯ ಪರಿಶೀಲನೆಯಲ್ಲಿದೆ.